ಪೊಟ್ಯಾಷ್ ಇಂಡಿಯಾ ಲಿಮಿಟೆಡ್ ಕುರಿತು.

2725: (3730)

ಶ್ರೀ ಎಂ.ಪಿ.ಅಪ್ಪಚ್ಚುರಂಜನ್ (ಸೋಮವಾರಪೇಟೆ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಜೂನ್‌ನಿಂದ ಪೊಟ್ಯಾಷ್ ಇಂಡಿಯಾ ಲಿಮಿಟೆಡ್‌ನಿಂದ ಎಷ್ಟು ಪೊಟ್ಯಾಷ್ ಗೊಬ್ಬರ ಕರ್ನಾಟಕಕ್ಕೆ ಬಂದಿರುತ್ತದೆ.

ಆ) ಎಷ್ಟು ಟನ್ ಗೊಬ್ಬರ ರೈತರಿಗೆ ವಿತರಣೆ ಆಗಿರುತ್ತದೆ.

ಇ) ಕಳೆದ ಮೂರು ವರ್ಷಗಳಲ್ಲಿ ಕಳಪೆ ಗೊಬ್ಬರ ಮಾರಿದ ಯಾವ ವ್ಯಾಪಾರಸ್ಥರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ (ವಿವರ ನೀಡುವುದು)

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಅ) ಇಂಡಿಯನ್ ಪೊಟ್ಯಾಷ್ ಲಿಮಿಟೆಡ್ ''ಎಂಬ ಹೆಸರಿನಲ್ಲಿ ಸಂಸ್ಥೆಯಿಂದ ಕಳೆದ ಜೂನ್ 98ರಿಂದ ಸೆಪ್ಟೆಂಬರ್ 98ರ ವರೆಗೆ 4,960 ಮೆಟ್ರಿಕ್ ಟನ್ ಸಲ್ಫೇಟ್ ಆಫ್ ಪೊಟ್ಯಾಷ್ ಮತ್ತು 20,916 ಮೆ.ಟನ್ ಮ್ಯೂರೆಟ್ ಆಫ್ ಪೊಟ್ಯಾಷ್ ಒಟ್ಟಾರೆ 25,876 ಮೆ. ಟನ್ ಪೊಟ್ಯಾಷ್ ರಸಗೊಬ್ಬರ ಕರ್ನಾಟಕ ರಾಜ್ಯಕ್ಕೆ ಬಂದಿರುತ್ತದೆ.

ಆ) 1998ನೇ ಮುಂಗಾರು ಹಂಗಾಮಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಒಟ್ಟಾರೆ 13,28,558 ಮೆ.ಟನ್ ಗೊಬ್ಬರ ಸರಬರಾಜು ಆಗಿರುತ್ತದೆ.

ಇ) ರಸಗೊಬ್ಬರ (ನಿಯಂತ್ರಣ) ಆದೇಶ 1985 ಮತ್ತು ಅಗತ್ಯ ವಸ್ತುಗಳ ಕಾಯ್ದೆ 1955ರ ಪ್ರಕಾರ ಕಳಪೆ ಗೊಬ್ಬರವನ್ನು ಮಾರಿದ ವ್ಯಾಪಾರಸ್ಥರು ಮತ್ತು ತಯಾರಕರ ಮೇಲೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗಿದೆ. ಸಂಸ್ಥೆವಾರು ಮಾರಾಟಗಾರರವಾರು ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ-1ರಲ್ಲಿ ನೀಡಲಾಗಿದೆ.